# ಸಂಪ್ರದಾಯದ ಕಾಲರುಪಟ್ಟಿ ಹಿಡಿದಾಕೆ

## ಫಣಿಯಮ್ಮ ಕಾದಂಬರಿಯ ದಾಕ್ಷಾಯಣಿ



**ಕಾವ್ಯಶ್ರೀ ಎನ್. ಮನಮನೆ**

ಕಲೆ: ಎಸ್.ವಿ. ಹೂಗಾರ್

ಬಾಲ ವಿಧವೆಯೊಬ್ಬಳು ಹೇರಿಕೆಯ ನಿಯಮಗಳಿಗೆ ಒಳಪಟ್ಟು ಬೇರೆಯವರಿಗಾಗಿಯೇ ಜೀವ ತೇಯುವ ಕಥೆಯನ್ನು ಹೇಳುವ ಕಾದಂಬರಿ 'ಫಣಿಯಮ್ಮ'. ಕಾದಂಬರಿಯ ಪ್ರಧಾನ ಪಾತ್ರ ಫಣಿಯಮ್ಮ ಎಂಟು ವರ್ಷಕ್ಕೆ ಸೀರೆ ಉಡಲಾರಂಭಿಸಿ, ಒಂಬತ್ತು ವರ್ಷಕ್ಕೆ ಮದುವೆಯಾಗುತ್ತಾಳೆ. ಮದುವೆಯಾದ ಎರಡೇ ತಿಂಗಳಿಗೆ ಗಂಡನನ್ನು ಕಳೆದುಕೊಂಡು ಆ ಕಾಲದ ಸಂಪ್ರದಾಯದಂತೆ ತಲೆಗೂದಲು ಬೋಳಿಸಿಕೊಂಡು 'ಮಡಿ'ಯಾಗುತ್ತಾಳೆ. ಆನಂತರ ದೊಡ್ಡ ಸಂಸಾರಕ್ಕೆ ಹಗಲು-ರಾತ್ರಿ ದುಡಿಯಲಾರಂಭಿಸಿ ಕೊನೆ ಕ್ಷಣದವರೆಗೂ ಅದುವೇ ತನ್ನ ಅನಿವಾರ್ಯ ಬದುಕು ಎಂಬದಂತೆ ಬದುಕಿದವಳು. 'ಫಣಿಯಮ್ಮ' ಕಾದಂಬರಿಯಲ್ಲಿ ಕಥಾನಾಯಕಿಯ ಪಾತ್ರದ ಎಲ್ಲ ರೀತಿಯ ವೈಭವೀಕರಣ, ಉದಾರತೆ, ಪರೋಪಕಾರ ಗುಣ ಇವೆಲ್ಲದರಾಚೆಗೆ ಕಥಾನಾಯಕಿಗಿಂತ ನನ್ನನ್ನು ಬಹುವಾಗಿ ಆಕರ್ಷಿಸಿದ ವ್ಯಕ್ತಿತ್ವ ಕಾದಂಬರಿಯ ಪುಟ್ಟ ಪಾತ್ರವಾದ ದಾಕ್ಷಾಯಣಿಯದು.

ಕಾದಂಬರಿಯಲ್ಲಿ ದಾಕ್ಷಾಯಿಣಿಯ ಪಾತ್ರ ಬರುವುದು ಕೊನೆಯ ಎರಡು ಅಧ್ಯಾಯಗಳಲ್ಲಿ ಮಾತ್ರ. ಫಣಿಯಮ್ಮನ ದೂರದ ಸಂಬಂಧಿ ನನ್ನನ್ನು ಕಾಡಿದ ಈ ದಾಕ್ಷಾಯಿಣಿ. ಫಣಿಯಮ್ಮನ ಸೋದರ ಮಾವನ ಮೊಮ್ಮಗ ಗುಡ್ಡೆಪಾಲು ಸೀತಾರಾಮನ ಮಗಳು ಆಕೆ. ಫಣಿಯಮ್ಮ ತೀರ್ಥಹಳ್ಳಿಯ ಅಣ್ಣನ ಮನೆಯಲ್ಲಿ ವಾಸವಿದ್ದಾಗ ಕೆಟ್ಟ ಸುದ್ದಿಯೊಂದು ಬರುತ್ತದೆ. ಅದು ದಾಕ್ಷಾಯಿಣಿಯ ಗಂಡ ತೀರಿಕೊಂಡ ಸುದ್ದಿ. ಗಂಡ ತೀರಿಕೊಂಡಾಗ ದಾಕ್ಷಾಯಿಣಿಗೆ ಬರೀ ಹದಿನಾರು ವರ್ಷ. ಮೈನೆರೆದ ಒಂದು ವರ್ಷದಲ್ಲಿ ಆಕೆಯ ಗಂಡ